(*c*) Orders of Government sanctioning the opening of the Combined Dispensary have been issued on 2nd February 1957, and a lady doctor posted.

N.E.S. Block to Chikmagalur Taluk.

Q.—371. Srimathi B. L. SUBBAMMA (Chikmagalur-Mudigere).—

Will the Government be pleased to state :—

(*a*) whether they propose to sanction a N.E.S. Block for Chikmagalur Taluk this year;

(*b*) whether they can make an assurance to the above effect in public interest in view of the three hoblis of this taluk having the benefit of the above scheme ?

A.—Sri H. S. RUDRAPPA (Minister for Agriculture).—

(*a*) The question of delimitation of blocks to cover the entire area of the taluk where at present only parts of taluks are covered is under consideration of Government.

(*b*) Does not arise in view of answer to (*a*)

DEMANDS FOR GRANTS "ON ACCOUNT" FOR 1957-58.

(Debate continued.)

ಅಧ್ಯಕ್ಷರು.—ನಿಮಗೆ ಹತ್ತು ನಿಮಿಷಕಾಲ ಮಾತ್ರ ಸ್ಪೆಷಲ್ಲಾಗಿ ಕೊಟ್ಟಿದ್ದೇನೆ.

*ಶ್ರೀಮತಿ ಬಳ್ಳಾರಿ ಸಿದ್ಧಮ್ಮ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ನನ್ನ ಮೇಲೆ ದಯೆಯಿಟ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ತಾವು ಕೊಟ್ಟಷ್ಟು ಕಾಲವನ್ನು ಕೂಡ ತೆಗೆದುಕೊಳ್ಳುವುದಿಲ್ಲ.

ನಾನು ಈ ಬಜೆಟ್ಟಿನ ಮೇಲೆ ನಾಲ್ಕು ಮಾತನ್ನಾಡಲು ಇಚ್ಛೆಪಡುತ್ತೇನೆ. ನಾನು ಈ ಬಜೆಟ್ಟನ್ನು ಡಿಮ್ಯಾಂಡನ್ನು ಮನಃಪೂರ್ವಕವಾಗಿ ಸ್ವಾಗತಿಸುತ್ತೇನೆ. ಕಳೆದ ಐದು ವರ್ಷಗಳಿಂದಲೂ ಈ ಸಭೆಯು ಬಹಳ ಹೆಮ್ಮೆಪಡುವಂಥ ಕೆಲಸಕಾರ್ಯಗಳನ್ನು ಮಾಡಿದೆ. ಅದರಲ್ಲಿಯೂ ನಮ್ಮ ಕಾಲದಲ್ಲಿ ಇನ್ನೂ ಹೆಚ್ಚಿನ ಸಂತೋಷದ ಸಂಗತಿ ಆಗಿದೆಯೆಂದು ನನಗನ್ನಿಸುತ್ತದೆ. ಏಕೆಂದರೆ, ಬಹಳ ದಿವಸಗಳಿಂದಲೂ ನಾವು ಹರಕೆಯನ್ನು ಹೊತ್ತು ಹಾರೈಸಿದಂತಹ ನೂತನ ಕರ್ಣಾಟಕವಾದದ್ದು ನಮ್ಮ ಕಾಲದಲ್ಲಿಯೇ. ಈ ಪ್ರಾಂತನಿರ್ಮಾಣವಾಗುವುದಕ್ಕೆ ಮೊದಲು ಬಾಪೂಜಿಯವರ ಆಶೀರ್ವಾದದಿಂದ ಮತ್ತು ಭಗವಂತನ ಇಚ್ಛೆಯಿಂದ ದೇಶಕ್ಕೆ ಸ್ವಾತಂತ್ರ್ಯ ಬಂತು. ಈ ಮಹತ್ತರವಾದ ಕರ್ಣಾಟಕ ಪ್ರಾಂತ ನಿರ್ಮಾಣ ನಮಗೆ ದೊಡ್ಡ ಕನಸಾಗಿತ್ತು. ಅದು ಈಗ ನನಸಾಯಿತು, ಅದನ್ನು ನಾವು ಅನುಭವಿಸುತ್ತಿರುವುದು ನಮ್ಮ ಸುದೈವವೆಂದು ಹೇಳಬೇಕಾಗಿದೆ ಮತ್ತು ಇವೊತ್ತು ಈ ರೀತಿಯ ನನಸನ್ನು ಕಾಣುತ್ತಾ ಇರುವುದು ನಮ್ಮ ಭಾಗ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತು ನಾನು ಆ ರೀತಿ ಒಂದು ಸಂತೋಷದಿಂದ ಇಲ್ಲಿ ಮಾತನಾಡಲು ನಿಂತಿದ್ದೇನೆ. ಹಿಂದೆ ನಾವು ಏನು ಒಂದು ಸಂಕುಚಿತ ಭಾವನೆ ಇಟ್ಟುಕೊಂಡಿದ್ದೆವೋ ಅಂತಹ ಒಂದು ಸಂಕುಚಿತ ಭಾವನೆ ಇಲ್ಲದೇ ಇರುವ ಕಾಲ ಬಂದಿದೆ. ಆದುದರಿಂದ ಇಂದು ಅಂತಹ ಒಂದು ಸಂದರ್ಭಕ್ಕೆ ತಕ್ಕಂತೆ ಅದಕ್ಕೆ ಸರಿಯಾದ ಯೋಜನೆಗಳನ್ನು ನಮ್ಮ ಸರ್ಕಾರದವರು ತಯಾರುಮಾಡುತ್ತಾರೆಂದು ನಾನು ಭಾವಿಸುತ್ತೇನೆ. ನಮ್ಮ ದೇಶದಲ್ಲಿ ಬೇಕಾದಷ್ಟು ಭೂಮಿಯಿದೆ. ಭೂಗರ್ಭ ಸಂಪತ್ತು, ಖನಿಜಗಳು ಇವುಗಳಿಂದ ಕೂಡಿ ಸಂಪದ್ಯುಕ್ತವಾಗಿದೆ. ಆದುದರಿಂದ ಇಂತಹ ಕನ್ನಡನಾಡನ್ನು ಸಂಪೂರ್ಣವಾಗಿ ಮತ್ತು ಯಶಸ್ವಿಯಾಗಿ ಅಭಿವೃದ್ಧಿಗೆ ತರಬೇಕೆಂಬ ಒಂದು ಆಸೆಯಿಂದ ನಾನು ಇವೊತ್ತು ಇಲ್ಲಿ ಮಾತನಾಡಬೇಕಾಗಿದೆ. ಹಿಂದೆ ನಾವು ಸ್ವಲ್ಪ ಜನರಿದ್ದೆವು, ಈಗ ನಾವೆಲ್ಲ ಸುಮಾರು ಒಟ್ಟು ಎರಡು ಕೋಟಿ ಜನರಿದ್ದೇವೆ. ಸ್ವಲ್ಪವೇನಲ್ಲ. ಗೀತೆಯಲ್ಲಿ ಒಂದು ವಚನವಿದೆ. ಪ್ರತಿಯೊಬ್ಬ ಮಾನವನೂ ಪ್ರತಿಯೊಂದು ಗಿಡದ ಮೂಲಕೆಯಿದ್ದಹಾಗೆ ಎಂದು ಹೇಳಿದ್ದಾರೆ. ಹೀಗಿರುವುದರಿಂದ ನಮ್ಮ ಈ ಎರಡು ಕೋಟಿ ಜನತೆಯನ್ನು ಅಭಿವೃದ್ಧಿಗೆ ತರಲು ಯತ್ನಿಸಬೇಕು. ಏನೊಂದೂ ಆಲಸ್ಯ ಮಾಡದೆ ಸರ್ಕಾರದವರು ಈ ರೀತಿಯ ಒಂದು ಸಾಹಸದ ಕಾರ್ಯವನ್ನು ಮಾಡಬೇಕೆಂದು ಕೋರುತ್ತೇನೆ. ಒಂದು ದೇಶದ ಅಡಳಿತವನ್ನು ಸುಭದ್ರವಾದ ತಳಹದಿಯ ಮೇಲೆ ಕಟ್ಟುವುದಕ್ಕೆ, ಸರಿಯಾದ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡು ಜನತೆಗೆ ಅನುಕೂಲ ಮಾಡಬೇಕು. ನಮಗೆ ಈಗ ಏನು ತೋರುತ್ತದೆಂದರೆ, ನಾವೆಷ್ಟು ಕಾರ್ಯಕ್ರಮಗಳನ್ನ ತೆಗೆದುಕೊಂಡರೂ, ಅಭಾವ ದಿನೇದಿನೇ ಹೆಚ್ಚುತ್ತಿದೆಯಲ್ಲದೆ ಕಡಿಮೆಯಾಗುತ್ತಿಲ್ಲ. ನಾವು ಎಷ್ಟೋ ದೊಡ್ಡದೊಡ್ಡ ಯೋಜನೆಗಳನ್ನು ಹಾಕಿದ್ದೇವೆ. ಆದರೂ ಅನ್ನದ ಅಭಾವ, ಮನೆಯ ಅಭಾವ ಕಡಿಮೆಯಾಗಲಿಲ್ಲ ಮತ್ತು ಬಡವರಿಗೆ ಯಾವ ರೀತಿಯಲ್ಲೂ ಹೆಚ್ಚಿನ ಉಪಯೋಗ ದೊರೆಯಲಿಲ್ಲ. ಆದುದರಿಂದ ನಮ್ಮ ದೇಶದಲ್ಲಿ ಹೆಚ್ಚಿನ ವ್ಯವಸಾಯಾಭಿವೃದ್ಧಿಗೆ ಇವೊತ್ತು ಅವಕಾಶ ಮಾಡಿಕೊಳ್ಳಬೇಕಾಗಿದೆ ಮತ್ತು ಅದಕ್ಕೆ ತಕ್ಕ ಯೋಜನೆಗಳನ್ನು ತಯಾರುಮಾಡಬೇಕಾಗಿದೆ. ಈಗಿರುವ ಯೋಜನೆಯೆಲ್ಲ ಬರಿ ಗಂಡನರಗೇ ಹೆಚ್ಚಿನ ಪ್ರಾಮುಖ್ಯತೆ ಕೊಡಲಾಗಿದೆ. ಮುಂದಿನ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಹೆಣ್ಣುಮಕ್ಕಳಿಗೆ ಪ್ರಾಶಸ್ತ್ಯ ಕೊಟ್ಟು ಗೃಹಕೈಗಾರಿಕೆಗಳು ಎಂದರೆ ಮನೆಯಲ್ಲಿಯೇ ಮಾಡುವಂತಹ ಕೆಲಸಗಳಿಗೆ ಪ್ರೋತ್ಸಾಹ ಕೊಡುವ ಯೋಜನೆಗಳನ್ನು ತಯಾರುಮಾಡಿ ಈ ರೀತಿ ಹೆಣ್ಣುಮಕ್ಕಳಿಗೆ ಅನುಕೂಲ ಮಾಡಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯ ತಮ್ಮ ಮುಂದೆ ಹೇಳಬೇಕಾಗಿದೆ. ಈಗ ದೊಡ್ಡದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟುತ್ತಿದ್ದೀರಿ. ವಿಶ್ವವಿದ್ಯಾನಿಲಯಗಳಿಂದ ಹೊಸದಾಗಿ ಪದವೀಧರರಾಗಿ ಬಂದ ಇಂಜಿನಿಯರುಗಳು ಈ ರೀತಿಯಾದ ಎಷ್ಟೋ ದೊಡ್ಡ ಯೋಜನೆಗಳಲ್ಲಿ ಕೆಲಸಗಳನ್ನು